ಕರ್ನಾಟಕ ಸರ್ಕಾರ

# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ

ದೇವರಾಜ ಅರಸು ಭವನ, ವಸಂತನಗರ, ಬೆಂಗಳೂರು-52, ದೂರವಾಣಿ : (080) 22342151

---

ಸಂಖ್ಯೆ: ದೇಸಂಸಂ/ಈಡಿಗ/ಸಿಆರ್-03/2023-24 ದಿನಾಂಕ: 15-04-2024

**ಮಾನ್ಯ ಕುಲಸಚಿವರು,**
**ಮೈಸೂರು ವಿಶ್ವವಿದ್ಯಾನಿಲಯ,**
**ಮಾನಸಗಂಗೋತ್ರಿ,**
**ಮೈಸೂರು.**

**ಮಾನ್ಯರೆ,**

ವಿಷಯ:- **ಈಡಿಗ, ಬಿಲ್ಲವ ಜನಾಂಗ ಸೇರಿದಂತೆ ಒಟ್ಟು 26 ಉಪಪಂಗಡಗಳ** ಕುಲಶಾಸ್ತ್ರೀಯ ಅಧ್ಯಯನದ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನದೆಂದರೆ, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಈಡಿಗ, ಬಿಲ್ಲವ ಜನಾಂಗ ಸೇರಿದಂತೆ ಒಟ್ಟು 26 ಉಪಪಂಗಡಗಳ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಲು ಸರ್ಕಾರದ ಆದೇಶವಾಗಿದ್ದು, ಅದರಂತೆ ಈ ಕೆಳಕಂಡಂತೆ ಎರಡು ಕಂತುಗಳಲ್ಲಿ ಸದರಿ ಕುಲಶಾಸ್ತ್ರೀಯ ಅಧ್ಯಯನದ ಒಟ್ಟು ಮೊತ್ತ ರೂ.18,75,000/- ಗಳನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಖಾತೆಗೆ ಜಮಾ ಮಾಡಲಾಗಿದೆ.

1) ಮೊದಲ ಕಂತು : ರೂ.12,50,000/- : ದಿನಾಂಕ: 19-02-2024
2) ಎರಡನೇ ಕಂತು : ರೂ. 6,25,000/- : ದಿನಾಂಕ: 18-03-2024
ಒಟ್ಟು ಮೊತ್ತ : ರೂ.18,75,000/-

ಮೇಲ್ಕಂಡ ಮೊತ್ತವನ್ನು (ಹಾಗೂ ಈ ಹಣಕ್ಕೆ ಕ್ರೋಢೀಕೃತವಾಗಬಹುದಾದ ಬ್ಯಾಂಕ್ ಬಡ್ಡಿಯನ್ನು ಸೇರಿದಂತೆ) ಮೇಲ್ಕಂಡ ಈಡಿಗ, ಬಿಲ್ಲವ ಜನಾಂಗ ಸೇರಿದಂತೆ ಒಟ್ಟು 26 ಉಪಪಂಗಡಗಳ ಕುಲಶಾಸ್ತ್ರೀಯ ಅಧ್ಯಯನಕ್ಕೆ ನಿಯಮಾನುಸಾರ ಕರಾರು ಪತ್ರದಲ್ಲಿ ತಿಳಿಸಿರುವಂತೆ ಬಳಸಿಕೊಳ್ಳಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,
ಬೆಂಗಳೂರು.

ಪ್ರತಿಯನ್ನು :-

ಡಾ. ಡಿ.ಸಿ. ನಂಜುಂಡ ರವರು, ಸಹಪ್ರಾಧ್ಯಾಪಕರು, ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ, ಮಾನವಿಕ ವಿಭಾಗಗಳು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ಇವರಿಗೆ ಮಾಹಿತಿಗಾಗಿ.